ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಒಂದು ನಿಮಿಷ, ನಾನು ಏನು ಸೂಚನೆ ಕೊಡುತ್ತೇನೆ ಎಂದರೆ ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳುವ ಬದಲು ಬೇರೆ ವೇಳೆಯಲ್ಲಿ ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಇದಕ್ಕೆ ವಿವರವಾದಂತಹ ವಿವರಣೆ ಕೊಡಬೇಕಾಗುತ್ತದೆ. ನಾಳೆ ಬೇಕಾದರೆ ಬೇರೆ ರೀತಿಯಲ್ಲಿ ತೆಗೆದುಕೊಂಡರೆ ನಾನು ಉತ್ತರ ಕೊಡುತ್ತೇನೆ. ಏಕೆಂದರೆ ಆ ವಿಷಯದ ಬಗ್ಗೆ ದೀರ್ಘವಾಗಿ ಮಾತನಾಡಬೇಕಾಗುತ್ತದೆ. ನಾಳೆ ಯಾವುದೇ ರೂಪದಲ್ಲಿ ತೆಗೆದುಕೊಳ್ಳಿ ನಾನು ಸಿದ್ಧ ಇದ್ದೇನೆ.

MR. SPEAKER : I think so. I think that is a better suggestion.

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಈ ವಿಷಯ ಅಧ್ಯಕ್ಷರಿಗೆ ಬಿಟ್ಟಿರುವಂತಹದ್ದು. ನಾನು ಇವತ್ತು ಪ್ರಸ್ತಾಪ ಮಾಡಬೇಕಾಗಿರುವುದು ಬಹಳ ಗಂಭೀರವಾದಂತಹ ವಿಷಯ ಅದು.

MR. SPEAKER : That is right. ಅವರು ಏನು ಹೇಳುತ್ತಾರೆ ಎಂದರೆ, ಹೌದು ನೀವು ಹೇಳಿದಂತೆ ಶೂನ್ಯ ವೇಳೆಯಲ್ಲಿ ಈ ಪ್ರಸ್ತಾಪ ಬೇಡ. ಸುರೇಶ ನೀವು ಅದನ್ನೇ ಪ್ರಸ್ತಾಪ ಮಾಡಬೇಕು. ಅದರಿಂದ What I say is, generally ನಾವು ಶೂನ್ಯ ವೇಳೆಯಲ್ಲಿ ಡಿಸ್‌ಕಷನ್ ಮಾಡುವುದಿಲ್ಲ, you would raise the issue and the Government would make a Statement.

ಏಕೆಂದರೆ, ಇದು ಬಹಳ ಗಂಭೀರವಾದಂತಹ ವಿಷಯ ಮತ್ತು ಮಂತ್ರಿಗಳು ವಾಲೆಂಟ್ರಿಯಾಗಿ ನಾಳೆ ತೆಗೆದುಕೊಳ್ಳೋಣ ಎಂದು ಹೇಳುತ್ತಿರುವುದರಿಂದ We will take it up tomorrow itself. ನಾಳೆ ನನ್ನ ಛೇಂಬರ್ಸ್‌ಗೆ ಬಂದರೆ list of business ಹೇಗೆ ಅರೇಂಜ್ ಮಾಡಬೇಕು ಎಂದು ಹೇಳುತ್ತೇನೆ. We will take it up tomorrow.

SRI.B. SOMASHEKHAR : Under any item you can take it up. I will come prepared.

MR. SPEAKER : We will take it up tomorrow.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನಾಳೆ ಆಗಬಹುದು, ನನ್ನದು ಏನೂ ಅಭ್ಯಂತರ ಇಲ್ಲ. ಏಕೆಂದರೆ ನಾಳೆ ಒಂದೇ ದಿವಸ ಸದನ ನಡೆಯುವುದು.

MR. SPEAKER : Tomorrow I will see that it is taken up. ಈಗ ವೀರಪ್ಪನ್ ವಿಚಾರಹೇಳಿ.

ವೀರಪ್ಪನ್ ಒಂಭತ್ತು ಮಂದಿ ಅರಣ್ಯ ಇಲಾಖಾ ನೌಕರರನ್ನು ಒತ್ತೆಯಾಳಾಗಿಟ್ಟು ಕೊಂಡಿರುವುದರ ಕುರಿತು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಸದನದಲ್ಲಿ ವೀರಪ್ಪನ್ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಇದು ಬಹಳ ಸೂಕ್ಷ್ಮವಾದಂತಹ ವಿಷಯ, 9 ಜನರ ಜೀವಕ್ಕೆ ಅಪಾಯ ಆಗಬಾರದು ಎಂದು ಹೇಳಿ ಈ ಸದನದಲ್ಲಿ ಬಂದಾಗ ನಾವು ಎಲ್ಲರೂ ಅದನ್ನು ಒಪ್ಪಿಕೊಂಡಿದ್ದೆವು. ಅನಂತರ ಮಂಗಳವಾರ ದಿವಸ ಇದನ್ನು ಯಾವುದೇ ರೀತಿಯಿಂದ ಚರ್ಚೆ ಮಾಡಬಹುದು ಎನ್ನುವುದು ತೀರ್ಮಾನ ಆಯಿತು. ಆದರೆ ಇವತ್ತು ತಮ್ಮ ಸಮ್ಮುಖದಲ್ಲಿ ಮುಖ್ಯ ಮಂತ್ರಿಯವರು ಇದ್ದರು, ಕಾನೂನು ಮಂತ್ರಿಗಳು ಇದ್ದರು ಮತ್ತು ವಿರೋಧಪಕ್ಷದ ಎಲ್ಲಾ ಮುಖಂಡರುಗಳೂ ಕೂಡ ಇದ್ದರು. ಈ ಒಂದು ಮಾತುಕತೆಯಲ್ಲಿ ದೀರ್ಘವಾಗಿ ನಾವು ಚರ್ಚೆ ಮಾಡುವುದು ಬೇಡ ಎಂದು ತೀರ್ಮಾನ ಆಯಿತು. ಆದರೆ, ಈ ಸರ್ಕಾರ ಪದೇ ಪದೇ ಅದರಲ್ಲೂ ವಿಶೇಷವಾಗಿ ಮುಖ್ಯ ಮಂತ್ರಿಗಳು ಸದನಕ್ಕೆ ಕೊಡತಕ್ಕಂತಹ ಸ್ಟೇಟ್‌ಮೆಂಟ್ ಬಿಟ್ಟು ಅಥವಾ ಸದನದಲ್ಲಿ ಏನು ಹೇಳಬೇಕೋ ಅದನ್ನು ಬಿಟ್ಟು, ಹೊರಗಡೆ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಮಾತ್ರ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾ ಇದ್ದಾರೆ ಆದರೆ, ಸದನ ಇಲ್ಲಿ ಸೇರಿರುವಾಗ ಅದೇ ಅಭಿಪ್ರಾಯ ನಾವು ಇಲ್ಲಿ ಕೇಳಿದಾಗ ಅವರು ಇಲ್ಲಿ ಹೇಳದೆ, ಹೊರಗಡೆ ಹೇಳತಕ್ಕಂತದ್ದು ಸಾಧು ಅಲ್ಲ, ಸಮಂಜಸವೂ ಕೂಡ ಅಲ್ಲ. ಅದಕ್ಕೆ ಈ ವಿಷಯ ಪ್ರಸ್ತಾವ ಮಾಡಬೇಕಾಗಿದೆ. ಅವರು ಯಾವ ರೀತಿಯಿಂದ ಹೇಳಬೇಕೋ ಹೇಳಲಿ, ಇದರ ಬಗ್ಗೆ ನಾನು ಜಾಸ್ತಿ ಹೇಳುವುದಿಲ್ಲ. ನಾವು ಜೆಂಟಲ್‌ಮನ್ ಎಂದು ಹೇಳಿದಮೇಲೆ ನಾವು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಸುಮಾರು ಎರಡು ಸಾವಿರ ಆನೆಯನ್ನು ಕೊಲೆ ಮಾಡಿದಂತಹ ಮನುಷ್ಯ, ಸುಮಾರು ನೂರು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಸ್ಯಾಂಡಲ್ ವುಡ್‌ನ್ನು ಕದ್ದಂತಹ ಮನುಷ್ಯ, ಸುಮಾರು 40 ಸಾವಿರ ಕೆ.ಜಿ. ಆನೆಯ ದಂತಗಳನ್ನು ಮಾರಿದಂತಹ ಮನುಷ್ಯ, ಸರ್ಕಾರದ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದಂತಹ ಮನುಷ್ಯನಿರುವ ಸ್ಥಳಕ್ಕೆ ಗೋಪಾಲ್ ಅಂತ ಒಬ್ಬರು ಪತ್ರಕರ್ತರು ಹೋಗಿ ಭೇಟಿ ಮಾಡಬಹುದು, ಕಾಣಬಹುದು, ನೋಡಬಹುದು. ಆದರೆ ನಮಗೆ ಇನ್ನೂ ಕೂಡ ಆತನನ್ನು ನೇರವಾಗಿ ನೋಡುವ ಅವಕಾಶವಿಲ್ಲ, ಅವರ ಸಂಪರ್ಕ ಅಂತೂ ಇಲ್ಲವೇ ಇಲ್ಲ. ಆತನನ್ನು ಹಿಡಿಯತಕ್ಕಂತಹ ಪ್ರಯತ್ನ ಕೂಡ ಇವತ್ತು ಆಗುತ್ತಾ ಇಲ್ಲ. ಆದರೆ ಇವತ್ತು ಜನರಲ್ಲಿ ಒಂದು ಕುತೂಹಲವನ್ನು ಉಂಟು ಮಾಡಿದೆ. ಏನು ಅಂದರೆ, ಒಬ್ಬ ಪತ್ರಕರ್ತರು, ಒಬ್ಬ ಜರ್ನಲಿಸ್ಟ್, ಒಬ್ಬರು ಎಡಿಟರ್ ಅವರು ಇರುವ ಸ್ಥಳಕ್ಕೆ ಹೋಗಬಹುದು, ಅವರ ಜೊತೆಯಲ್ಲಿ 4,5, ಜನ ಹೋಗಬಹುದು, ವಿಡಿಯೋ ಕ್ಯಾಸೆಟ್ ಮಾಡಬಹುದು, ಟೇಪ್ ಮಾಡಿಕೊಂಡು ಬರಬಹುದು. ಆದರೆ ಇದೂವರೆವಿಗೂ ಇಂಟಲಿಜೆಂಸ್ಸ್ ಡಿಪಾರ್ಟ್‌ಮೆಂಟ್‌ಗೆ ಇವರ ಸುಳಿವು ಸಿಗುತ್ತಾ ಇಲ್ಲ. ತಮಿಳು ನಾಡು ಸರ್ಕಾರಕ್ಕೂ ಮತ್ತು ನಮ್ಮ ಕರ್ನಾಟಕ ಸರ್ಕಾರಕ್ಕೂ ಮಧ್ಯದಲ್ಲಿ ಏನಾದರೂ ಹೊಂದಾಣಿಕೆ ಇಲ್ಲವೆ? ಈ ಮಧ್ಯದಲ್ಲಿ ಏನಾದರೂ ಮಿಸ್ ಅಂಡರ್‌ಸ್ಟ್ಯಾಂಡಿಗ್ ಇದೆಯೇ? ನಮ್ಮ ಸರ್ಕಾರದವರು ಹಿಡಿಯಬೇಕು ಎಂದು ಇದ್ದಾರಾ? ತಮಿಳುನಾಡು ಸರ್ಕಾರದವರು ಬಿಡಬೇಕು ಎಂದು ಏನಾದರೂ ಇದ್ದಾರಾ? ಎನ್ನತಕ್ಕಂತಹ ಪ್ರಶ್ನೆ ನಮ್ಮ ಮುಂದೆ ಬಂದಿದೆ. ಏಕೆಂದರೆ

ಇವತ್ತು ಅವನು ಕೇಳತಕ್ಕಂತಹ ಜೀವದಾನ ಅಥವಾ ಕ್ಷಮಾದಾನವನ್ನು ಕೊಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂತಹ ಮಾತನ್ನು ತಾವು ಈ ಸದನದಲ್ಲಿ ಹೇಳಿದ್ದೀರಿ, ಆದರೆ ಪ್ರೆಸಿಡೆಂಟ್ ಆಫ್ ಇಂಡಿಯಾನೇ ಕ್ಷಮಾದಾನ ಮಾಡಬಹುದು. ಆದರೆ ಯಾವ ದೃಷ್ಟಿಯಿಂದ ಈ ಅಮಿನೆಸ್ಟಿ ಎಂಬ ಪದ ಬಂತು ? ಮತ್ತು ಅದಕ್ಕೆ ಪ್ರಥಮವಾಗಿ ಸ್ಪಂದನೆ ನಮ್ಮ ಸರ್ಕಾರದವರೂ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂತು. ವೀರಪ್ಪನ್ ಏನು 11 ಕಂಡೀಷನ್‌ಗಳನ್ನು ಹಾಕಿದ್ದಾನೆ, ಆ 11 ಕಂಡೀಷನ್ಸ್ ಕೂಡ ನಮ್ಮ ಸರ್ಕಾರದವರು ಒಪ್ಪಿದ್ದಾರೆ ಎಂದು ಒಂದು ಸಾರಿ ಬಂತು. ಆದರೆ ಮತ್ತೊಂದು ಸಾರಿ ಇಲ್ಲಾ, ನಾವು 11 ಕಂಡೀಷನ್ಸ್‌ಗೆ ಒಪ್ಪಿಲ್ಲ ಕೇವಲ 4,5, ಕಂಡೀಷನ್ಸ್‌ಗೆ ಮಾತ್ರ ನಾವು ಒಪ್ಪಿದ್ದೇವೆ ಎನ್ನತಕ್ಕಂತಹ ವಿಷಯವನ್ನು ನಾವು ಪತ್ರಿಕೆಯಲ್ಲಿ ಓದಿರುವುದು ಗೊತ್ತು. ಇವತ್ತು ಏನಾಗಿದೆ ಎಂದರೆ ಸುಮಾರು 133 ಕ್ರೈಂ ಮಾಡಿದಂತಹ ಮನುಷ್ಯ, ಸುಮಾರು 111 ಪೋಲೀಸ್ ಅಧಿಕಾರಿಗಳಿಗೆ ಮತ್ತು ಫಾರೆಸ್ಟ್ ಅಧಿಕಾರಿಗಳನ್ನು ಕೊಂದಂತಹ ಮನುಷ್ಯ, ಸುಮಾರು 60 ಜನರನ್ನು ಗಾಯಗೊಳಿಸಿದಂತಹ ಮನುಷ್ಯ, ಸರ್ಕಾರದ ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡಿದಂತಹ ಮನುಷ್ಯನಿಗೆ ನಾವು ಯಾವ ರೀತಿಯಿಂದ ಕ್ಷಮಾದಾನ ಕೊಡಬೇಕು? ಎನ್ನುವುದು ಒಂದು ಪ್ರಶ್ನೆ. ಇಲ್ಲಿಯವರೆಗೆ ಆತನನ್ನು ಹಿಡಿಯಲು ಸುಮಾರು 100 ಕೋಟಿ ರೂಪಾಯಿವರೆವಿಗೆ ಖರ್ಚಾಗಿದೆ. ಪ್ರತಿ ತಿಂಗಳು ಇಂಟಲಿಜೆಂನ್ಸ್ ಡಿಪಾರ್ಟ್‌ಮೆಂಟ್ ಅವರು ಡಿಸ್‌ಕ್ರಿಷನರಿ ಅಮೌಂಟ್ ಎಂದು 62 ಲಕ್ಷ 772 ರೂಪಾಯಿ ಖರ್ಚು ಮಾಡಿರುತ್ತಾರೆ ಏಕೆಂದರೆ ಅವರಿಗೆ ಕೊಟ್ಟೆ ಇವರಿಗೆ ಕೊಟ್ಟೆ, ಮಾಹಿತಿ ಸಂಪಾದನೆ ಮಾಡುವರಿಗೆ ಕೊಟ್ಟೆವು ಎಂದು ಹೇಳುತ್ತಾರೆ. ಹೀಗೆ ಹೆಚ್ಚು ಕಡಿಮೆ ಪ್ರತಿ ತಿಂಗಳು 62 ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆ. ಖರ್ಚಾಗಲಿ, ಆದರೆ ಹಿಡಿಯುವ ಕೆಲಸವಾದರೂ ಆಗಬೇಕಲ್ಲ. ಆದರೆ ಇಲ್ಲಿಯವರೆಗೆ ಲೆಕ್ಕ ಹಾಕಿದರೆ ಸುಮಾರು ನೂರು ಕೋಟಿ ರೂಪಾಯಿಗಳು ಸಮೀಪ ಬರುತ್ತದೆ. ಆದುದರಿಂದ, ದಯವಿಟ್ಟು ತಾವು ಈ ಬಗ್ಗೆ ಏನು ಕ್ರಮವನ್ನು ಜರುಗಿಸಿದ್ದೀರೋ, ಏಕೆಂದರೆ ನಾವು ಈ ವಿಷಯವನ್ನು ಪತ್ರಿಕೆಯಲ್ಲಿ ತಿಳಿದುಕೊಳ್ಳುವುದು ಬೇಡ. ಸದನದ ಮುಖಾಂತರ ಜನರಿಗೂ ಗೊತ್ತಾಗಲಿ. ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ಮತ್ತು ಎಷ್ಟರ ಮಟ್ಟಿಗೆ ಅವರನ್ನು ಹತೋಟಿಯಲ್ಲಿಡಲು ಪ್ರಯತ್ನ ಮಾಡುತ್ತಿದ್ದೀರಿ, ಮತ್ತು ಈ ಒಂಭತ್ತು ಜನರನ್ನು ಒತ್ತೆಯಾಳು ಮಾಡಿಕೊಂಡು ಇಟ್ಟುಕೊಂಡಿದ್ದಾನೆ ಅವರಿಗೆ ಬಿಡುಗಡೆ ಮಾಡತಕ್ಕಂತಹ ಪ್ರಯತ್ನ ಏನು ನಡೆದಿದೆ, ಅವರು ಯಾವ ಸ್ಥಿತಿಯಲ್ಲಿ ಇದ್ದಾರೆ, ಅವರು ಸುರಕ್ಷಿತವಾಗಿ ಇದ್ದಾರೋ, ಇಲ್ಲವೋ ತಿಳಿಸಬೇಕು. ಏಕೆಂದರೆ ಇವತ್ತಿನ ಪತ್ರಿಕೆಯಲ್ಲಿ ಬಂದಿದೆ, ಅವರು ಇದ್ದಂತಹ ಜಾಗದಿಂದ ಬೇರೆ ಕಡೆ ಸ್ಥಳಾಂತರ ಮಾಡಿದ್ದಾರೆ, ಇನ್ನೂ ಅವರನ್ನು ಇನ್‌ಟೀರಿಯರ್‌ಗೆ ಕರೆದುಕೊಂಡು ಹೋಗಿದ್ದಾನೆ ಎಂದು ಸುದ್ದಿ ಬಂದಿದೆ. ಅದಕ್ಕೆ ತಾವು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ಬೇಕಾದರೆ 3,4, ದಿವಸ ಆದ ಮೇಲೆ ಲೋಪದೋಷಗಳ ಬಗ್ಗೆ ಚರ್ಚೆ ಮಾಡೋಣ. ಸಧ್ಯಕ್ಕೆ ತಾವು ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ತಮ್ಮ ಕೊಠಡಿಯಲ್ಲಿ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದಾಗ, ಬಹುಶಃ ಸರ್ಕಾರ ಇವತ್ತಿನ ಸ್ಥಿತಿಗತಿಗೆ ಅನುಕೂಲವಾಗಿ ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ಹೇಳಿದಿರಿ. ಈಗ ಬಂದಿರುವ ಆತಂಕಕಾರಿ ಸಂಗತಿ ಎಂದರೆ, ಸರ್ಕಾರದ

ಪರವಾಗಿ ಮೆಸೇಜ್ ತೆಗೆದುಕೊಂಡು ಬರುವುದಕ್ಕೆ ಹೋದಂತಹ ಗೋಪಾಲ್‌ರವರೇ ಬಂಧನದಲ್ಲಿ ಇದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ವಿಡಿಯೋ ಕ್ಯಾಸೆಟ್ ಕಳಿಸಿ ಕೊಟ್ಟಿದ್ದಾರೆ ಆ ಕ್ಯಾಸೆಟ್‌ನ್ನು ತಮಿಳು ನಾಡಿನ ಮುಖ್ಯ ಮಂತ್ರಿಯವರು ಮತ್ತು ನಮ್ಮ ಮುಖ್ಯ ಮಂತ್ರಿಯವರು ಸಹ ನೋಡುತ್ತಾ ಇದ್ದಾರೆ ಎಂಬ ಸುದ್ದಿ ಬಂದಿದೆ. ಒಂದು ರೀತಿ ಸರ್ಕಾರವನ್ನೇ ಬ್ಲಾಕ್‌ಮೇಲ್ ಮಾಡುವಂತಹದ್ದು ನಡೆಯುತ್ತಾ ಇದೆ. ಸರ್ಕಾರ ಒಬ್ಬ ನರ ಹಂತಕನನ್ನು ಹಿಡಿದು ಆತನಿಗೆ ಶಿಕ್ಷೆ ವಿಧಿಸುವುದಕ್ಕೆ ಆಗದೆ, ಕೈ ಕಟ್ಟಿಕೊಂಡು ಕುಳಿತುಕೊಂಡಿರುವ ಪರಿಸ್ಥಿತಿ ನಾವು ಕಾಣುತ್ತಾ ಇದ್ದೇವೆ. ಜನ ಸಹ ಇದನ್ನು ಪತ್ರಿಕೆಯಲ್ಲಿ ನೋಡಿದಾಗ ಇಲ್ಲಿ ಯಾವುದೋ ನಾಟಕ ನಡೆಯುತ್ತಾ ಇದೆ. ಯಾರೂ ಈ ವಿಷಯವನ್ನು ನಂಬುವುದಕ್ಕಾಗದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಗೋಪಾಲನಂತವರಿಗೆ ಯಾರು ಸುದ್ದಿ ಕಳಿಸುತ್ತಾರೆ? ವೀರಪ್ಪನ್ ಎಲ್ಲಿ ಇದ್ದಾನೆ, ಅವನು ಜಾಗ ಬದಲಾವಣೆ ಮಾಡಿದರೆ ಆತನು ಅವನಿರುವ ಸ್ಥಳಕ್ಕೆ ಹೇಗೆ ಹೋಗುತ್ತಾನೆ,? ಈ ಎಲ್ಲಾ ವಿಷಯಗಳು ಅವನಿಗೆ ಗೊತ್ತಾಗಬೇಕಾದರೆ, ನಿಮ್ಮ ಸರ್ಕಾರಕ್ಕೆ ಏಕೆ ಗೊತ್ತಾಗುವುದಿಲ್ಲ? ಇದು ಏನೂ ಅರ್ಥವಾಗದ ಪರಿಸ್ಥಿತಿ. ದಯಮಾಡಿ ಇವತ್ತಿನ ಪರಿಸ್ಥಿತಿ ಏನು? ಆ ಗೋಪಾಲ್ ಅವರನ್ನು ಬಂಧನದಲ್ಲಿ ಇಟ್ಟುಕೊಂಡಿರುವುದು ನಿಜವಾ? ಕ್ಯಾಸೆಟ್ ಏನಾದರೂ ಕಳಿಸಿದ್ದಾರಾ? ಏನಾದರೂ ಮಾಹಿತಿಯನ್ನು ಸದನದ ಮೂಲಕ ಕೊಡುತ್ತೀರಾ? ವಾಸ್ತವಿಕವಾದ ಸ್ಥಿತಿಯನ್ನು ತಾವು ದಯಮಾಡಿ ತಿಳಿಸಬೇಕು. ಅಂತರ ಬೇಕಾದರೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕೆಂದು ತಾವು ಸದನಕ್ಕೆ ಭರವಸೆ ಏನು ಕೊಟ್ಟಿದ್ದೀರಿ, ಸರ್ಕಾರ ಸುಮ್ಮನೆ ಒಂದು ಹೇಳಿಕೆ ಕೊಡಬೇಕೆಂದಲ್ಲ. ಸಮಗ್ರವಾಗಿ ಚರ್ಚೆಯಾಗಬೇಕೆನ್ನುವುದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಇವೊತ್ತು ತಮ್ಮ ಕೊಠಡಿಯಲ್ಲಿ ವಿರೋಧ ಪಕ್ಷಗಳ ಮುಖಂಡರುಗಳ ಸಭೆ ನಡೆದಾಗ ಇನ್ನೂ ಒಂದೆರಡು ದಿವಸಗಳ ಕಾಲಾವಕಾಶ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನೋಡೋಣ, ಅಲ್ಲಿಯವರೆಗೆ ನಾವೇನು ಕಾಲಾವಕಾಶ ಕೊಡಬಾರದೆಂಬ ಉದ್ದೇಶ ನಮ್ಮದಲ್ಲ. ಆದರೆ, ಸಾಧನೆ ಏನು ಎನ್ನುವ ಪ್ರಶ್ನೆ ಬಂದಾಗ ಸರ್ಕಾರ ಮೋಸಕ್ಕೆ ಒಳಗಾಗಿರಬೇಕೆಂದು ನನಗನ್ನಿಸುತ್ತದೆ. ಕರ್ನಾಟಕ ಸರ್ಕಾರ ವೀರಪ್ಪನ್‌ನ ತಂತ್ರಗಾರಿಕೆಗೆ, ಪಿತೂರಿಗೆ ಬಲಿಯಾಗಿದೆಯೆಂಬ ಸಂಶಯ ನನಗಿದೆ. ಇದರ ಬಗ್ಗೆ ಎರಡನೆ ಅಭಿಪ್ರಾಯವಿಲ್ಲ. ಈ ಸಂಶಯ ಮುಂದೆ ನಿಜವಾದರೂ ಆಗಬಹುದು. ಏಕೆಂದರೆ, ಇಂತಹ ನೂರಾರು ಪ್ರಕರಣಗಳಲ್ಲಿ ಆ ವ್ಯಕ್ತಿ ಎಲ್ಲರನ್ನೂ ಮೋಸ ಮಾಡಿದ್ದಾನೆ, ಇದು ನಿರಂತರವಾಗಿ ನಡೆದಿರತಕ್ಕಂಥಾದ್ದು. ಏಕಾಏಕಿಯಾಗಿ ಒಂದೇ ದಿನದಲ್ಲಿ ಆತ ಕೇಳಿರುವಂಥ ಎಲ್ಲಾ ಷರತ್ತುಗಳನ್ನು ಒಪ್ಪಿದರೂ ನನಗೆ ಸಂಪೂರ್ಣ ಕ್ಷಮಾದಾನ ನೀಡುವುದಾದರೆ ಶರಣಾಗತಿಗೆ ಒಪ್ಪುತ್ತೇನೆ ಎನ್ನುವಂಥ ಸುದ್ದಿಗಳು ಬರುತ್ತಿವೆ. ನಾನು ಸರ್ಕಾರಕ್ಕೆ ನೇರವಾಗಿ ಹೇಳುತ್ತಿದ್ದೇನೆ: ಈ ಕುರಿತ ಯಾವುದೇ ವಿಚಾರವನ್ನು ಗೌಪ್ಯವಾಗಿ ಇಡಬೇಡಿ, ಈ ಸದನದಲ್ಲಿ ತಾವು ಯಾವುದನ್ನೂ ಮುಚ್ಚಿಡಬಾರದು, ಪ್ರಮಾಣಿಕವಾಗಿ ನಡೆದಿರತಕ್ಕಂಥ ಎಲ್ಲಾ ಕಥೆಯ ಸಮಗ್ರವಾದ ವಿವರಗಳನ್ನಿಡಬೇಕು. ನಾನು ಈ ಹಂತದಲ್ಲಿ ಹೇಳುವುದೇನೆಂದರೆ, ಈ ಸಂಬಂಧಿತ ಚರ್ಚೆಗೆ ಅನುಕೂಲವಾಗುವ ರೀತಿಯಲ್ಲಿ

ಒಂದು 'ಶ್ವೇತ ಪತ್ರ' ವನ್ನು ಸದನದಲ್ಲಿ ಮಂಡಿಸಬೇಕು. ಪ್ರಾರಂಭದಲ್ಲಿ ಯಾವ್ಯಾವ ರೀತಿಯಾಯಿತು? ಕಳೆದ ಸುಮಾರು 10-15 ವರ್ಷಗಳಿಂದ ನಡೆದಿರತಕ್ಕಂಥ ಸಮಗ್ರ ವಿಚಾರಗಳು, ಅಂದರೆ. ಎಷ್ಟು ಜನರು ಸತ್ತಿದ್ದಾರೆ? ಎಸ್.ಟಿ.ಎಫ್.ನಿಂದ ಎಷ್ಟು ಜನರು ಸತ್ತಿದ್ದಾರೆ? ಆತನ ಕಡೆಯಿಂದ ಎಷ್ಟು ಜನ ಸತ್ತಿದ್ದಾರೆ? ಅವರು ಯಾವ್ಯಾವ ಜೈಲಿನಲ್ಲಿದ್ದರು? ಇದುವರೆವಿಗೂ ಖರ್ಚಾಗಿರುವ ಹಣವೆಷ್ಟು? ಆಸ್ತಿ ನಷ್ಟ ಎಷ್ಟಾಗಿದೆ? ಮುಂತಾದ ವಿಚಾರಗಳನ್ನೊಳಗೊಂಡಂಥ ಒಂದು ಶ್ವೇತ ಪತ್ರವನ್ನು ತಾವು ಈ ಸದನದಲ್ಲಿ ಮಂಡಿಸಿದಲ್ಲಿ ಅದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿದಾಗ ಅದರಿಂದ ನಮಗೆ ಹೊಸ ಬೆಳಕು ದೊರಕುತ್ತದೆಂಬುದು ಒಂದು ಅಭಿಪ್ರಾಯ. ಈಗ ನನಗೆ ಅತ್ಯಂತ ನೋವಾಗಿದೆ. ಆ ಪತ್ರಿಕಾ ಸಂಪಾದಕರು ಯಾರು? ಆತನ ಜೊತೆಯಲ್ಲಿ ನೀವು ಯಾರ್ಯಾರು ಮಾತನಾಡಿದ್ದೀರಿ? ಏನೇನು ಮಾತನಾಡಿದ್ದೀರಿ? ತಮಿಳುನಾಡಿನ ಸರ್ಕಾರದವರು ಅವರ ಜೊತೆ ಏನು ಮಾತನಾಡಿದ್ದಾರೆ? ಗೋಪಾಲ್ ಎನ್ನುವವರು ಯಾವ ಕಾರಣಕ್ಕೆ ಪರಿಚಯವಾದದ್ದು? ಹೇಗೆ? ಗೋಪಾಲ್‌ರವರಿಗೂ ವೀರಪ್ಪನ್‌ಗೂ ಇರುವ ಸಂಬಂಧಗಳೇನು? ಹೀಗೆ ಒಂದಕ್ಕೊಂದು ಸಂಬಂಧವಿರುವ ವಿಚಾರಗಳ ಬಗ್ಗೆ ನೋಡಿದಾಗ ಸಾಮಾನ್ಯವಾಗಿ ಇಂತಹ ವಿಚಾರವನ್ನು ಬಹಳ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ನೀವು ಗಮನಿಸಬೇಕಾಗಿತ್ತು. ಈ ವಿಚಾರದಲ್ಲಿ ಕರ್ನಾಟಕ ಸರ್ಕಾರದವರು ಹೆಜ್ಜೆಹೆಜ್ಜೆಗೂ ನೇರವಾಗಿ ತಪ್ಪಿದ್ದೀರಿ ಎನ್ನುವುದನ್ನು ನಾನು ಈಗಲೂ ಹೇಳುತ್ತೇನೆ. ಏಕೆಂದರೆ, ಸದರಿ ಪ್ರಕರಣ ಬಂದಾಗಿನಿಂದ ನಾನು ಇಲ್ಲಿಯವರೆಗೆ ಐದು ಅರಣ್ಯ ಸಚಿವರನ್ನು, ಆರು ಗೃಹ ಸಚಿವರುಗಳನ್ನು ಹಾಗೂ ಐದನೇ ಮುಖ್ಯಮಂತ್ರಿಗಳನ್ನು ನೋಡುತ್ತಿದ್ದೇನೆ. ಇದರ ಬಗ್ಗೆ ವಾದವೇನೂ ಇಲ್ಲ. ವೀರಪ್ಪನ್ ಬಗ್ಗೆ ಅಲ್ಲಿಂದ ಇಲ್ಲಿಯವರೆವಿಗೂ ಹೀಗೆಯೇ ಹೇಳಿಕೊಂಡು ಬರುತ್ತಿದ್ದೇವೆ. ನಾವು ಏನೋ ಒಂದು ರೀತಿಯಲ್ಲಿ ಆಟ ಆಡುತ್ತಿದ್ದೇವೆಯೇ? ಅಥವಾ ನಾವೇ ಮೋಸಕ್ಕೆ ಸಿಲುಕಿಕೊಂಡಿದ್ದೇವೆಯೇ? ನಾನು ನಿಮ್ಮನ್ನು ವೈಯಕ್ತಿಕವಾಗಿ ಆರೋಪಿಸುತ್ತಿಲ್ಲ. ನೀವು ಎಚ್ಚರದಲ್ಲಿಲ್ಲ, ಎಚ್ಚರ ತಪ್ಪುತ್ತಿದ್ದೀರಿ, ಎಲ್ಲೋ ಒಂದು ಹಂತದಲ್ಲಿ ನೀವು ಜಾರಿ ಬೀಳುತ್ತಿದ್ದೀರಿ ಎನ್ನುವ ಎಚ್ಚರಿಕೆಯನ್ನು ನಾನು ತಮಗೆ ಕೊಡುತ್ತಿದ್ದೇನೆ. ತಮಗೆ ಈ ವಿಷಯದಲ್ಲಿ ಕಾಲಾವಕಾಶ ಬೇಕೆನ್ನುವುದಾದರೆ ನನ್ನದೇನೂ ಅಭ್ಯಂತರವಿಲ್ಲ, ಅದಕ್ಕೆ ನನ್ನ ತಕರಾರಿಲ್ಲ. ಇಷ್ಟು ದಿವಸಗಳೇ ಕಾಲಾವಕಾಶ ಕೊಟ್ಟಿದ್ದೇವೆ, ಇನ್ನು ಒಂದೆರಡು ದಿವಸಗಳಿಗೆ ಕಾಲಾವಕಾಶ ಕೊಡಲು ನನ್ನದೇನೂ ತಕರಾರಿಲ್ಲ. ಆದರೆ, ನೀವು ಎಚ್ಚರದಲ್ಲಿದ್ದೀರಾ? ಇದುವರೆವಿಗೂ ನಡೆದಿರತಕ್ಕಂಥ ಎಲ್ಲಾ ವಿಚಾರಗಳ ಬಗ್ಗೆ ತಾವು ಎಚ್ಚರ ವಹಿಸಿದ್ದೀರಾ? ಎನ್ನುವ ಒಂದು ಅನುಮಾನ ನನ್ನನ್ನು ಕಾಡುತ್ತಿದೆ. ಇದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಈ ಅನುಮಾನವನ್ನು ಹೋಗಲಾಡಿಸುವುದಕ್ಕಾದರೂ ನಿಮ್ಮಲ್ಲಿರತಕ್ಕಂಥ ಸಮಗ್ರ ಅಂಕಿ-ಅಂಶಗಳನ್ನು ಈ ಸದನದ ಮುಂದೆ ತಾವು ಮಂಡಿಸಬೇಕು. ಕೊನೆಯದಾಗಿ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಕ್ಯಾಸೆಟ್‌ನಲ್ಲಿ ತಿಳಿಸಿರುವುದನ್ನು ನೀವು ಏನು ಕೇಳಿದ್ದೀರಿ, ಅದರ ಬಗ್ಗೆ ನಮ್ಮ ಕಿವಿಗಳಿಗೂ ಕದ್ದಾದರೂ ಸ್ವಲ್ಪ ಕೇಳಿಸಿದರೆ, ಇದು ಎಷ್ಟು ಮೋಸ ಎಂದು ನಾವಾದರೂ ನಿಮಗೆ ಹೇಳುತ್ತೇವೆ. ಕ್ಯಾಸೆಟ್‌ನಲ್ಲಿರುವುದನ್ನು ಬಹಿರಂಗವಾಗಿ ಕೇಳಿಸದೇ ಇದ್ದರೂ ಒಂದು ಕೊಠಡಿ ಯಲ್ಲಿ ನಮ್ಮನ್ನು ಸೇರಿಸಿ ಕಿವಿಗೆ ಶಬ್ದ ಕೇಳುವ ರೀತಿ ಕ್ಯಾಸೆಟ್ ಹಾಕಿದರೆ ಯಾವ್ಯಾವ ಪದಗಳಿಂದ ನಿಮಗೆ ಮೋಸವಾಗರಿಬಹುದು, ಇದನ್ನು ಏಕೆ

ನಂಬುತ್ತೀರಿ, ಎನ್ನುವುದರ ಬಗ್ಗೆ ನಮ್ಮ ಸಲಹೆ ತೆಗೆದುಕೊಳ್ಳುವುದಾದರೆ ನಾವಾದರೂ ತಮಗೆ ಸಲಹೆ ಕೊಡುತ್ತೇವೆ. ಏಕೆಂದರೆ, ಇಂತಹ ವಿಚಾರದಲ್ಲಿ ಮುಂದೆ ಬಹಳ ದಿವಸಗಳ ಕಾಲ ಕಾಯ್ದು ಹೋಗತಕ್ಕಂತಾದ್ದಲ್ಲ. ನಾನು ಮೊದಲೇ ಹೇಳಿದ್ದೇನೆ: ಕರ್ನಾಟಕ ಸರ್ಕಾರ ಶರಣಾಗಿರುವುದು ನೇರವಾಗಿ ವೀರಪ್ಪನ್‌ಗೆ. ಮೊದಲಿನಿಂದಲೂ ವೀರಪ್ಪನ್ ನಮ್ಮನ್ನು ಈ ರೀತಿಯಿಂದ ತಪ್ಪು ದಾರಿಗೆಳೆದಿರುವುದು ಇದೊಂದೇ ಸಂದರ್ಭ ಅಲ್ಲ, ಅನೇಕ ಸಂದರ್ಭಗಳಲ್ಲಿ ತಪ್ಪು ದಾರಿಗೆಳೆದಿದ್ದಾನೆ. ತಮಿಳುನಾಡಿಗೆ ಆತನ ಮೇಲೆ ಪ್ರೀತಿ, ವಿಶ್ವಾಸವಿದೆ. ಆದರೆ, ಮನುಷ್ಯರನ್ನು ಕಳೆದುಕೊಂಡಿರುವುದು ಮತ್ತು ಅಮೂಲ್ಯವಾದ, ಅಪಾರವಾದ ನಷ್ಟವುಂಟಾಗಿರುವುದು ಕರ್ನಾಟಕಕ್ಕೆ. ಆದುದರಿಂದ, ಕರ್ನಾಟಕಕ್ಕಾಗಿರುವ ನಷ್ಟವನ್ನು ಈ ದೇಶದಲ್ಲಿ ಯಾರೂ ತುಂಬಿಕೊಡಲು ಸಾಧ್ಯವಿಲ್ಲ. ಆದ್ದರಿಂದ ತಾವು ಯಾವ ಮಾರ್ಗ ತುಳಿದಿದ್ದೀರಿ? ಯಾವ ಹೆಜ್ಜೆಯನ್ನಿಟ್ಟಿದ್ದೀರಿ? ಎಂಬುದರ ಬಗ್ಗೆ ಸದನದ ಮುಂದೆ ಹೇಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ವೀರಪ್ಪನ ಸ್ವಯಂ ಪ್ರೇರಣೆಯಿಂದ ತನ್ನ ಭಾಷಣದ ಹಾಗೂ ದೃಶ್ಯದ ಎರಡು ಕ್ಯಾಸೆಟ್‌ಗಳನ್ನು ತಮಿಳು ನಾಡಿನ ಮುಖ್ಯಮಂತ್ರಿಗಳಿಗೆ, ನನಗೆ ಮತ್ತು ನಮ್ಮ ಅರಣ್ಯ ಮಂತ್ರಿಗಳಾದ ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಕಳುಹಿಸಿದರು. ಆ ಕ್ಯಾಸೆಟ್‌ನಲ್ಲಿ ಅವರು ಹೇಳಿರುವ ಪ್ರಕಾರ, ತಮಿಳಿನಲ್ಲಿ ಹೇಳಿರುವುದರಿಂದ ನನಗರ್ಥವಾಗುವುದಿಲ್ಲ, 'ಅಮ್ನೆಸ್ಟಿ' ಎಂದು ಹೇಳಿತ್ತಿದ್ದರು. ಅಮ್ನೆಸ್ಟಿ ಪದವೇನಿದೆ, ಕಾನೂನಿನ ಪ್ರಕಾರ ಸಾಧ್ಯವಿಲ್ಲವೆನ್ನುವುದು ಆತನಿಗೆ ಗೊತ್ತಿಲ್ಲದಿರಬಹುದು. ಅದಕ್ಕೋಸ್ಕರ ನಾನು ಆ ಕ್ಯಾಸೆಟ್ಟನ್ನು ವೀಕ್ಷಿಸಿದ ದಿವಸವೇ ತಮಿಳುನಾಡಿಗೆ ಹೋಗಿ ಅಲ್ಲಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರೊಂದಿಗೆ ಸಂಭಾಷಿಸಿದೆ. ಏಕೆಂದರೆ, ಇದೊಂದು ವ್ಯಕ್ತಿಯ ಅಥವಾ ಹಿಂದೆ ಆಗಿರುವ ಹಲವಾರು ಪ್ರಾಣಗಳ ಹಾನಿ ಪ್ರಶ್ನೆಯಲ್ಲ. ಇಂತಹ ದುಷ್ಟ ಶಕ್ತಿಗಳಿಗೆ ಇಲ್ಲಿಯವರೆಗೆ ಬಹಳ ಜನ ಹತರಾದರು, ಹಾಗೂ ಬಹಳಷ್ಟು ಪ್ರಾಣಿಗಳು ಹತವಾದವು. ಆತನೇ ಮೊದಲು ಕ್ಯಾಸೆಟ್ ಕಳುಹಿಸಿರುವುದರಿಂದ ನಾವು ಎರಡೂ ಸರ್ಕಾರಗಳು ಹುಷಾರಾಗಿರುವುದು ಒಳ್ಳೆಯದೆಂದು ನಾನು, ಎಂ.ಸಿ.ನಾಣಯ್ಯನವರು, ಗುರುಪಾದಪ್ಪ ನಾಗಮಾರಪಲ್ಲಿ ಹಾಗೂ ರೋಷನ್ ಬೇಗ್‌ರವರು ಹೋಗಿ ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆ ಮಾತುಕತೆಯಲ್ಲಿ ಹೇಳಿದೆವು. ಆತನ ವಿಚಾರದಲ್ಲಿ ಕಾನೂನಿನ ಪ್ರಕಾರ ಇದನ್ನು ಮಾಡುವುದಕ್ಕೆ ಬರುತ್ತದೆಯೇ? ಇಲ್ಲವೇ? ಎಂದು. ಆತನಿಗೆ ಗೊತ್ತಿಲ್ಲದಿರಬಹುದು. ಆದರೆ, ಇನ್ನೊಂದು ಸಲ 'ನಕ್ಕೀರನ್' ವಾರಪತ್ರಿಕೆ ಸಂಪಾದಕರಾದ ಗೋಪಾಲರವರನ್ನು ಕಳುಹಿಸಿಕೊಡೋಣವೆಂದು ಕ್ಯಾಸೆಟ್ ಅನ್ನು ಅವರೇ ತಂದಿದ್ದರಿಂದ ಗೋಪಾಲ್‌ರವರನ್ನು ಕರೆಸಿದರು, ನೀವೇ ಹೋಗಿ ಬನ್ನಿ ಎಂದು ಕಳುಹಿಸಿಕೊಡಲಾಯಿತು. ನಂತರ ಅವರಿಗೆ ಹೇಳಿದ್ದೇನೆಂದರೆ, ಅವರ ನಾಲ್ಕು ಬೇಡಿಕೆಗಳು, ಅಂದರೆ ಒಟ್ಟು ಸಂಖ್ಯೆಯಲ್ಲ, ಕೆಲವನ್ನು ಕೇಳಿದ್ದು, ಅದರಲ್ಲಿ ಟೋಟಲ್ ಫರ್‌ಗೀವನೆಸ್ ಕೊಡುವುದು, ತಮಿಳುನಾಡಿನ ಕೋರ್ಟಿನಲ್ಲೇ ನನ್ನ ವಿಚಾರಣೆಯಾಗಬೇಕೆಂಬುದು, ಹಾಗೂ ಆತನ ವಿರುದ್ಧ ಕರ್ನಾಟಕದಲ್ಲಿ ಹೂಡಲಾಗಿದ್ದ ಕೇಸುಗಳನ್ನೆಲ್ಲಾ ಸುಪ್ರಿಂ ಕೋರ್ಟ್ ಅನುಮತಿ ತೆಗೆದುಕೊಂಡು ತಮಿಳುನಾಡು ಕೋರ್ಟಿಗೆ ವರ್ಗಾಯಿಸುವುದು. ಈ ಮೂರ್ನಾಲ್ಕು ಬೇಡಿಕೆಗಳ ಬಗ್ಗೆ

ನಮಗೇನೂ ಅಭ್ಯಂತರವಿರಲಿಲ್ಲ. ತಮಿಳುನಾಡಿನ ಚೀಫ್ ಸೆಕ್ರೆಟರಿ ಮತ್ತು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಯವರಿಬ್ಬರೂ ಕುಳಿತು ಮಾತನಾಡಿದಾಗ ಕೆಲವು ಬೇಡಿಕೆಗಳಿಗೆ ಮಾತ್ರ ನಾವು ಒಪ್ಪಿಗೆ ಕೊಡುತ್ತೇವೆ, ಉಳಿದದ್ದಕ್ಕೆ ಒಪ್ಪಿಗೆ ಕೊಡುವುದಿಲ್ಲ, ಇದನ್ನು ಆತನ ಬಳಿಗೆ ಹೋಗಿ ತಿಳಿಸಿ. ಎಂದು ಕಳುಹಿಸಿಕೊಟ್ಟೆವು. ಈ ವಿಚಾರವನ್ನು ನಾನು ಸದನಕ್ಕೆ ಏಕೆ ತಿಳಿಸಲಿಲ್ಲವೆಂದರೆ ಸದನಕ್ಕೆ ತಿಳಿಸುವುದು ನನ್ನ ಆದ್ಯ ಕರ್ತವ್ಯ. ಆದರೆ, ಆ ಕುರಿತು ಏನೂ ಬೆಳವಣಿಗೆಗಳಾಗಲಿಲ್ಲ, ಯಾವುದೇ ಹೊಸ ಸುದ್ದಿ ಬರಲಿಲ್ಲ. ಅಲ್ಲದೆ, ನಮ್ಮ ರಾಜ್ಯದ ಒಂಭತ್ತು ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿರುವುದರಿಂದ ಅವರುಗಳ ಪ್ರಾಣದ ಮತ್ತು ಕುಟುಂಬಗಳ ಹಿತದೃಷ್ಟಿಯಿಂದ ನಾನು ಮಾನಾಡುವುದು ಸರಿಯಲ್ಲ. ಏಕೆಂದರೆ, ಆತನ ಮೇಲಿನ ಸಿಟ್ಟಿನಿಂದ ನಾವು ಏನೇನೋ ಹೇಳಬಹುದು, ನಮ್ಮ ಅಧಿಕಾರಿಗಳು ಹೇಳಬಹುದು. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರಲ್ಲಿ ಕನ್‌ಸ್ಟ್ರಕ್ಟೀವ್ ಟರ್ನ್ ಏನಾದರೂ ತೆಗೆದುಕೊಂಡರೆ ಆಗ ಸದನಕ್ಕೆ ಹೇಳೋಣವೆಂದು ಇದ್ದೇನೆ. ಮುಂದೆ ನಾವೇನು ಮಾಡುತ್ತೇವೆಂದು ಆ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು. ಈ ಕುರಿತ ವಿಷಯವನ್ನು ಸದನದ ಮುಂದೆ ಯಾವ ಸಂದರ್ಭದಲ್ಲಿ ಮಂಡಿಸಬೇಕೆನ್ನುವುದನ್ನು ಮಾನ್ಯ ಅಧ್ಯಕ್ಷರೊಂದಿಗೆ ಹಾಗೂ ತಮ್ಮನ್ನು ಕನ್‌ಸಲ್ಟ್ ಮಾಡಿ ಅವಶ್ಯವಿದ್ದರೆ ತಿಳಿಸುತ್ತೇನೆ. I have a hope that it may turn out to be good in the interest of the State. 'It may' or it may not. ಅದರ ಬಗ್ಗೆ ನಿರ್ಣಾಯಕ ತೀರ್ಪು ತೆಗೆದುಕೊಳ್ಳುವವರೆಗೂ ಸದನದಲ್ಲಿ ಚರ್ಚೆ ಬೇಡವೆಂದು ತಮ್ಮನ್ನು ಹಾಗೂ ವಿರೋಧ ಪಕ್ಷಗಳ ನಾಯಕರುಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕ್ಯಾಸೆಟ್‌ನಲ್ಲಿ ಅವರು ಏನೇನು ಬೇಡಿಕೆಗಳನ್ನು ಕೇಳಲಾಗಿತ್ತು, ಅದರಲ್ಲಿ ನಾಲ್ಕು ಬೇಡಿಕೆಗಳನ್ನು ಒಪ್ಪಿ ಪತ್ರ ಬರೆದಿರುವುದರಿಂದ ತಾವು ಏನೆಂದು ಪತ್ರ ಬರೆದಿದ್ದೀರಿ? ಒಪ್ಪಿರುವ ನಾಲ್ಕು ಬೇಡಿಕೆಗಳು ಯಾವುದೆಂದು ಗೊತ್ತಾಗಬೇಕಲ್ಲ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವೊತ್ತಿನ ಒಂದು ಸಂಜೆ ಪತ್ರಿಕೆಯಲ್ಲಿ ವರದಿ ಯಾಗಿರುವಂತೆ, ವೀರಪ್ಪನ್ ಗೋಪಾಲ್ ಅವರನ್ನು ಹಿಡಿದಿಟ್ಟು ಕೊಂಡಿದ್ದಾನೆ ಎಂದು ಸುದ್ದಿ ಇರುವುದರಿಂದ ಇದರಲ್ಲಿ ಸತ್ಯಾಂಶವೇನಾದರೂ ಇದೆಯೇ?

ಶ್ರೀ ಜೆ.ಹೆಚ್.ಪಟೇಲ್ : ಅದರ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕ್ಯಾಸೆಟ್ ತಮಿಳಿನಲ್ಲಿ ಇತ್ತೆಂದು ತಾವು ಹೇಳಿದಿರಿ. ತಮಗೆ ತಮಿಳಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದವರು ಯಾರು? ಇಲ್ಲವೆಂದು ಏನಾಗುತ್ತದೆಂದರೆ ಆತ ಹೇಳಿರುವುದು ಒಂದಾದರೆ ತರ್ಜುಮೆ ಮಾಡಿ ಇನ್ನೊಂದು ರೀತಿಯಲ್ಲಿ ಹೇಳಿದರೆ ನಿಮಗೆ ಫಜೀತಿವುಂಟಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಪೋಲೀಸ್ ಅಧಿಕಾರಿಗಳೇ ಕನ್ನಡಕ್ಕೆ ಸರಿಯಾಗಿ ತರ್ಜುಮೆಗೊಳಿಸಿ ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಆತ ಒತ್ತೆಯಾಳಾಗಿ ಇರಿಸಿಕೊಂಡಿರುವ ಅರಣ್ಯ ಸಿಬ್ಬಂದಿಗಳ ಸ್ಥಿತಿ ಏನು? ಅವರ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ.

ಶ್ರೀ ಜೆ.ಹೆಚ್.ಪಟೇಲ್ : ಒತ್ತೆಯಾಳುಗಳಿಗೆ ಯಾವುದೇ ಅಪಾಯವಿಲ್ಲವೆಂದು ಪೋಲೀಸರು ಹೇಳಿದ್ದಾರೆ.

5.40 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪಾ : ಶ್ರೀ ಗೋಪಾಲ್ ಅವರು ವೀರಪ್ಪನ್‌ನ ಬಂಧನದಲ್ಲಿ ಇದ್ದಾನೆಂದು ಇವತ್ತು ಪತ್ರಿಕೆಗಳಲ್ಲಿ ವರದಿ ಬಂದಿದೆ. ಅದರ ಸತ್ಯಾಂಶ ಏನು?

ಶ್ರೀ ಜೆ.ಎಚ್. ಪಟೇಲ್ : ಆ ಬಗ್ಗೆ ನಮಗೆ ಮಾಹಿತಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ವೀರಪ್ಪನ್ ಕಳುಹಿಸಿದ ಕ್ಯಾಸೆಟ್ ತಮಿಳಿನಲ್ಲಿ ಇತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ತಮಿಳು ಭಾಷೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದವರು ಯಾರು? ತರ್ಜುಮೆ ಮಾಡುವಾಗ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ?

ಶ್ರೀ ಜೆ.ಎಚ್. ಪಟೇಲ್ : ನಮ್ಮ ಪೋಲೀಸ್ ಇಲಾಖೆಯ ಅಧಿಕಾರಿಗಳು ಕನ್ನಡಕ್ಕೆ ತರ್ಜುಮೆ ಮಾಡಿ ನನಗೆ ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೀರಪ್ಪನ್ ಅಪಹರಿಸಿರುವ ಅರಣ್ಯ ಇಲಾಖಾ ಸಿಬ್ಬಂದಿ ಪರಿಸ್ಥಿತಿ ಏನು?

ಶ್ರೀ ಜೆ.ಎಚ್. ಪಟೇಲ್ : ತೊಂದರೆ ಏನೂ ಇಲ್ಲ ಎಂದು ನಮಗೆ ಮಾಹಿತಿ ಬಂದಿದೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

ಜಿಂದಾಲ್ ಉಕ್ಕುಕಾರ್ಖಾನೆಗೆ 2 ಟಿ.ಎಂ.ಸಿ. ನೀರನ್ನು ತುಂಗಭದ್ರಾ ಜಲಾಶಯದ ರಾಯಬಸವನ ಕಾಲುವೆಯಿಂದ ಬಿಡುಗಡೆ ಮಾಡುವುದಕ್ಕೆ ಬದಲಾಗಿ ತುಂಗಭದ್ರಾ ಜಲಾಶಯದ ಕೋಟಾದಿಂದ ಬಿಡುಗಡೆ ಮಾಡುವುದು.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಮಾನ್ಯ ಅಧ್ಯಕ್ಷರೇ, ಜಿಂದಾಲ್ ಉಕ್ಕು ಕರ್ಖಾನೆಗೆ 2 ಟಿ.ಎಂ.ಸಿ. ನೀರನ್ನು ತುಂಗಭದ್ರಾ ಜಲಾಶಯದ ರಾಯಬಸವ ಕಾಲುವೆಯಿಂದ ಬಿಡುಗಡೆ ಮಾಡುವುದಕ್ಕೆ ಬದಲಾಗಿ ತುಂಗಭದ್ರಾ ಜಲಾಶಯದ ಕೋಟಾದಿಂದ ಬಿಡುಗಡೆ ಮಾಡುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.